# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 649
ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್
ಉತ್ತರಿಸುವ ದಿನಾಂಕ : 17.09.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಭೂ ಒಡೆತನ ಯೋಜನೆಯಡಿ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಸಾಲ ಸೌಲಭ್ಯ ಕೋರಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಅನುಬಂಧ-1ರಲ್ಲಿ ನೀಡಿದೆ. |
| ಆ) | ಈ ಪೈಕಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ; (ಮಾಹಿತಿ ನೀಡುವುದು) | |
| ಇ) | ಈ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ವಿಧಿಸಿದ ಷರತ್ತುಗಳನ್ನು ಉಲ್ಲಂಘನೆ ಮಾಡಿರುವವರ ವಿರುದ್ಧ ದಾಖಲಾದ ಪ್ರಕರಣಗಳೆಷ್ಟು; ಮತ್ತು ಸದರಿಯವರ ವಿರುದ್ಧ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಭೂ ಒಡೆತನ ಯೋಜನೆಯಡಿ ಫಲಾನುಭವಿಗಳಿಗೆ ವಿಧಿಸಿರುವ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಪ್ರಕರಣಗಳ ವಿವರ.<br><br>1. ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಮಲ್ಲಿಗಮಡು ಗ್ರಾಮದ ಸರ್ವೆ ನಂ:126/ಆ ಭೂಮಿಯ ಗುಣಮಟ್ಟದ ಬಗ್ಗೆ ಸುಳ್ಳು ವರದಿ ಸಲ್ಲಿಸಿ ಫಲವತ್ತತೆ ಇಲ್ಲದ ಭೂಮಿಯನ್ನು ನೊಂದಣಿ ಮಾಡಿಸಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಹಾಗೂ ಬೇರೆ ಭೂಮಿ ತೋರಿಸಿ ವಂಚಿಸಿರುವ ಭೂ ಮಾಲೀಕರು ಹಾಗೂ ಇತರೆ ಜನರ ವಿರುದ್ಧ ಮಾನ್ವಿ ಪೋಲೀಸ್ ಠಾಣೆಯಲ್ಲಿ 06 ಜನರ ಮೇಲೆ ಪ್ರಕರಣ ದಾಖಲಾಗಿರುತ್ತದೆ. ತನಿಖೆ ಪ್ರಗತಿಯಲ್ಲಿದೆ.<br>2. ವಿಜಯಪುರ ಜಿಲ್ಲೆ/ತಾಲ್ಲೂಕಿನ ಹೊಕ್ಕುಂಡಿ ಗ್ರಾಮದ ಸರ್ವೆ ನಂ:107/2 ರಲ್ಲಿ 9.10 ಎಕರೆ. 107/3 ರಲ್ಲಿ 9.11 ಎಕರೆ ಭೂಮಿ ಮಂಜೂರಾತಿ ಪಡೆದು ನೊಂದಣಿ ಆಗಿದೆ. ಫಲಾನುಭವಿಗಳು ಸ್ಥಳೀಯರು ಅಲ್ಲದಿದ್ದರೂ ಸ್ಥಳೀಯರಂತೆ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸೌಲಭ್ಯ ಪಡೆದಿರುವ ಬಗ್ಗೆ ಒಟ್ಟು 09 ಫಲಾನುಭವಿಗಳ ವಿರುದ್ಧ ಜಲನಗರ ಠಾಣೆ ವಿಜಯಪುರ ಇಲ್ಲಿ ಮೊಕದ್ದಮೆ ದಾಖಲಾಗಿದೆ. ತನಿಖೆ ಪ್ರಗತಿಯಲ್ಲಿದ್ದು ಜಮೀನು ಹಿಂಪಡೆಯಲು ಉಪ ವಿಭಾಗಾಧಿಕಾರಿಯವರ ನ್ಯಾಯಾಲಯ ವಿಜಯಪುರ ಇಲ್ಲಿ ವಿಚಾರಣೆ ನಡೆಯುತ್ತಿದೆ. |

ಸಂಖ್ಯೆ: ಸಕಇ 433 ಎಸ್‌ಡಿಸಿ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.

# ಅನುಬಂಧ–1

## ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು

| ಕ್ರ.ಸಂ | ಜಿಲ್ಲೆಯ ಹೆಸರು | 2018–19 | | 2019–20 | | 2020–21 | |
|---|---|---|---|---|---|---|---|
| | | ಸ್ವೀಕರಿಸಿದ ಅರ್ಜಿ ಸಂಖ್ಯೆ | ಆಯ್ಕೆಯಾದ ಅರ್ಜಿಗಳ ಸಂಖ್ಯೆ | ಸ್ವೀಕರಿಸಿದ ಅರ್ಜಿ ಸಂಖ್ಯೆ | ಆಯ್ಕೆಯಾದ ಅರ್ಜಿಗಳ ಸಂಖ್ಯೆ | ಸ್ವೀಕರಿಸಿದ ಅರ್ಜಿ ಸಂಖ್ಯೆ | ಆಯ್ಕೆಯಾದ ಅರ್ಜಿಗಳ ಸಂಖ್ಯೆ |
| 1 | ಬೆಂಗಳೂರು ನಗರ | 0 | 0 | 0 | 0 | 5 | 0 |
| 2 | ಬೆಂಗಳೂರು (ಗ್ರಾ) | 6 | 0 | 13 | 2 | 6 | 2 |
| 3 | ಚಿತ್ರದುರ್ಗ | 10 | 0 | 21 | 5 | 50 | 0 |
| 4 | ಚಿಕ್ಕಬಳ್ಳಾಪುರ | 12 | 0 | 0 | 6 | 26 | 19 |
| 5 | ಕೋಲಾರ | 0 | 0 | 63 | 0 | 8 | 1 |
| 6 | ದಾವಣಗೆರೆ | 0 | 0 | 0 | 13 | 16 | 0 |
| 7 | ರಾಮನಗರ | 5 | 0 | 0 | 0 | 12 | 4 |
| 8 | ಶಿವಮೊಗ್ಗ | 6 | 1 | 5 | 0 | 5 | 0 |
| 9 | ತುಮಕೂರು | 6 | 0 | 12 | 13 | 22 | 3 |
| 10 | ಚಾಮರಾಜನಗರ | 88 | 4 | 68 | 13 | 6 | 9 |
| 11 | ಚಿಕ್ಕಮಗಳೂರು | 7 | 0 | 5 | 3 | 11 | 3 |
| 12 | ದಕ್ಷಿಣ ಕನ್ನಡ | 0 | 0 | 0 | 0 | 10 | 0 |
| 13 | ಹಾಸನ | 0 | 0 | 0 | 0 | 22 | 9 |
| 14 | ಕೊಡಗು | 0 | 0 | 7 | 0 | 0 | 0 |
| 15 | ಮಂಡ್ಯ | 21 | 11 | 29 | 8 | 21 | 13 |
| 16 | ಮೈಸೂರು | 55 | 0 | 11 | 14 | 39 | 32 |
| 17 | ಉಡುಪಿ | 0 | 0 | 0 | 0 | 2 | 0 |
| 18 | ಬಾಗಲಕೋಟೆ | 0 | 33 | 0 | 612 | 11 | 404 |
| 19 | ಬೆಳಗಾವಿ | 37 | 38 | 35 | 118 | 113 | 149 |
| 20 | ವಿಜಯಪುರ | 691 | 2 | 119 | 162 | 7 | 125 |
| 21 | ಧಾರವಾಡ | 80 | 4 | 40 | 32 | 25 | 1 |
| 22 | ಗದಗ | 68 | 3 | 411 | 25 | 3 | 45 |
| 23 | ಹಾವೇರಿ | 4 | 1 | 0 | 4 | 17 | 2 |
| 24 | ಉತ್ತರ ಕನ್ನಡ | 0 | 0 | 0 | 0 | 6 | 0 |
| 25 | ಬಳ್ಳಾರಿ | 0 | 1 | 28 | 66 | 56 | 4 |
| 26 | ಬೀದರ್ | 0 | 2 | 0 | 0 | 73 | 13 |
| 27 | ಕಲಬುರಗಿ | 69 | 44 | 2213 | 133 | 896 | 400 |
| 28 | ಕೊಪ್ಪಳ | 629 | 1 | 212 | 0 | 23 | 18 |
| 29 | ರಾಯಚೂರು | 1175 | 9 | 875 | 147 | 33 | 547 |
| 30 | ಯಾದಗಿರಿ | 153 | 193 | 83 | 23 | 31 | 363 |
| ಒಟ್ಟು | | 3122 | 347 | 4250 | 1399 | 1555 | 2166 |

ಷರಾ:- ಕಳೆದ ಮೂರು ವರ್ಷಗಳಿಂದ ಭೂ ಒಡೆತನ ಯೋಜನೆಯಡಿ 8927 ಅರ್ಜಿಗಳನ್ನು ಸ್ವೀಕರಿಸಿದ್ದು, ಅದರಲ್ಲಿ 3912 ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಬಾಕಿ 5015 ಅರ್ಜಿಗಳಿಗೆ ಮಂಜೂರಾತಿ ನೀಡಬೇಕಾಗಿದ್ದು, ಅನುದಾನದ ಲಭ್ಯತೆ ಇಲ್ಲದ ಕಾರಣ ಬಾಕಿ ಇಡಲಾಗಿದೆ. ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಮಂಜೂರಾತಿಗೆ ಕ್ರಮ ವಹಿಸಲಾಗುವುದು.